

# ದಟ್ಟಾರಣ್ಯದಲ್ಲಿ ಪುಟ್ಟ ಜಲಪಾತ

■ **ಬಿ. ಮಂಜುನಾಥ ಕಾಮತ್**
ಚಿತ್ರ: ಬಿ. ಮಾಧವ ಕಾಮತ್

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಸಮೀಪದ ತೊಂಬಟ್ಟು ಎಂಬಲ್ಲಿನ ದಟ್ಟಾರಣ್ಯದಲ್ಲಿ ಇರ್ಕಿಗದ್ದೆ ಎಂಬ ಈ ಪುಟ್ಟ ಜಲಪಾತವಿದೆ. ಅಮಾಸೆಬೈಲಿನಿಂದ ಹದಿಮೂರು ಕಿ.ಮೀ. ದೂರಕ್ಕಿರುವ  ಈ ಜಲಪಾತ ತಲುಪಲು ಕಾಡ ನಡುವಿನ ರಸ್ತೆಯಲ್ಲಿ ಸಾಗಿ, ಕೊನೆಯ ಮೂರು ಕಿ.ಮೀ. ಮಣ್ಣಿನ ದುಸ್ತರ ರಸ್ತೆಯನ್ನು ಕ್ರಮಿಸಬೇಕಾಗುತ್ತದೆ.

ಪಶ್ಚಿಮ ಘಟ್ಟದ ಬಾಳೆಬರೆಯ ಪದತಲೆಯಲ್ಲೇ ಈ ಪುಟ್ಟ ಜಲಪಾತವಿದೆ. ನಿತ್ಯ ಹರಿದ್ವರ್ಣದ ದಟ್ಟಾರಣ್ಯದ ಮೂಲಕ ಹರಿಯುವ ತೊರೆಯ ನಿರ್ಮಲ ಮತ್ತು ಕಡುತಂಪು ಜಲಧಾರೆಯು ಸರಿಸುಮಾರು ಹತ್ತು, ಹನ್ನೆರಡು ಅಡಿಗಳ ಎತ್ತರದ ನಾಲ್ಕು ಸ್ತರದಲ್ಲಿ ಬಂಡೆಗಳ ಮೇಲಿಂದ ಬೆಳ್ನೊರೆ ಚೆಲ್ಲುತ್ತಾ ಕೆಳಗೆ ಧುಮುಕುತ್ತದೆ. ಈ ದೃಶ್ಯ ವೈಭವದ ಸೊಬಗನ್ನು ಕಣ್ಣಾರೆ ನೋಡಿಯೇ ಸವಿಯಬೇಕು.

ಈ ಜಲಪಾತದ ಇಕ್ಕೆಲದಿಂದಲೂ ಹಾಗೂ ನೀರು ಕಡಿಮೆ ಇದ್ದಾಗ ಮೇಲಿನಿಂದಲೂ ಇಳಿದು ಬಂದು ಜಲಧಾರೆಗೆ ಮೈಯೊಡ್ಡಲು ಸಾಧ್ಯವಿದೆ. ಒಂದು ಪಾರ್ಶ್ವದಲ್ಲಿ, ವಿಸ್ತಾರವಾದ ಕಲ್ಲಿನ ಜಾರುಹಾಸು ಮತ್ತು ಮರಗಳ ತಂಪು ನೆರಳು ಹರಡಿಕೊಂಡಿದ್ದು ವಿಶ್ರಮಿಸಲು ಕೂಡಾ ಅನುಕೂಲವಿದೆ.

ದುರದೃಷ್ಟವೆಂದರೆ, ಸುಲಭಕ್ಕೆ ತಲುಪಲು ಸಾಧ್ಯವಾಗದ ಈ ಜಲಪಾತವಿರುವಲ್ಲಿಗೆ ಎಲ್ಲೆಲ್ಲಿಂದಲೋ ಬರುವ ವಿಕೃತ ಮನಸ್ಸಿನ ಯುವಕರು ವಿನಾ ಕಾರಣ ಕೇಕೆ ಹಾಕಿ ಇಲ್ಲಿನ ಅರಣ್ಯ ಶಾಂತಿಯನ್ನು ಕದಡುತ್ತಾರೆ. ತಾವು ತಂದ ಬಾಟಲ್‌ಗಳನ್ನು ಎಲ್ಲೆಂದರಲ್ಲಿ ಎಸೆಯುತ್ತಾರೆ. ಅರಣ್ಯ ಇಲಾಖೆಯ ಆಗುಂಬೆ ವಲಯದ ಸುಪರ್ದಿಯಲ್ಲಿರುವ ಈ ಪ್ರದೇಶದಲ್ಲಿ ಅವರದೊಂದು ಚಿಕ್ಕ ಪರಿವೀಕ್ಷಣಾ ಕೊಠಡಿಯೂ ಇದೆ. ಇತ್ತೀಚೆಗೆ ಇಲಾಖೆಯವರು ಈ ತ್ಯಾಜ್ಯ ಎಸೆಯುವ ಪ್ರವೃತ್ತಿಗೆ ತುಸು ಕಡಿವಾಣ ಹಾಕುವುದರಲ್ಲಿ ಸಫಲವಾದಂತೆ ತೋರುತ್ತದೆ. ಆದರೂ ಒಮ್ಮೊಮ್ಮೆ ಅವರ ಕಣ್ತಪ್ಪಿಸಿ ಈ ವಿಕೃತಿ ನಡೆಯುತ್ತಲೇ ಇರುತ್ತದೆ.

ತಲುಪಲು ತುಸು ತ್ರಾಸದಾಯಕವಾಗಿದ್ದರೂ, ಕುಟುಂಬ ಸದಸ್ಯರೊಂದಿಗೆ ಪ್ರಕೃತಿಯ ಸೊಬಗು ಅನುಭವಿಸಲು ಇದು ಪ್ರಶಸ್ತ ತಾಣವಾಗಿದೆ. ಸೆಪ್ಟೆಂಬರ್‌ನಿಂದ ಡಿಸೆಂಬರ್ ತನಕ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿಯುವುದರಿಂದ, ಭೇಟಿಗೆ ಇದೇ ಸೂಕ್ತಕಾಲವೆಂದು ಹೇಳಬಹುದು. ಅಂತೆಯೇ ಚಾರಣದ ಮೂಲಕ ಇಲ್ಲಿಗೆ ತಲುಪಬಯಸುವ ಉತ್ಸಾಹಿಗಳು ಅಪೂರ್ವ ವನಚರಗಳ ದರ್ಶನ, ಮುಳುಗಡೆ ಪ್ರದೇಶದ ವೀಕ್ಷಣೆ, ಪೂರ್ವದಿಕ್ಕಿನಲ್ಲಿ ಉದ್ದಕ್ಕೂ ಚಾಚಿರುವ  ಪಶ್ಚಿಮಘಟ್ಟದ ವಿಹಂಗಮ ನೋಟವನ್ನು ಆಸ್ವಾದಿಸಬಹುದು. ●